# ಧಾರ್ಮಿಕ ಸಂಸ್ಥೆಗಳ (ದುರುಪಯೋಗ ಪ್ರತಿಬಂಧ) ಅಧಿನಿಯಮ, 1988

**15.03.1999ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 17ನೇ ಸಂಪುಟದ 1ನೇ ಸಂಚಿಕೆಯಲ್ಲಿ 10 ರಿಂದ 12ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.**

## ಪ್ರಕರಣಗಳ ಅನುಕ್ರಮಣಿಕೆ


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಕೆಲವು ಉದ್ದೇಶಗಳಿಗಾಗಿ ಧಾರ್ಮಿಕ ಸಂಸ್ಥೆಗಳನ್ನು ಉಪಯೋಗಿಸುವುದರ ಬಗ್ಗೆ ನಿಷೇಧ
4. ಧಾರ್ಮಿಕ ಸಂಸ್ಥೆಯೊಳಗೆ ಆಯುಧಗಳು ಮತ್ತು ಮದ್ದುಗುಂಡುಗಳನ್ನು ಒಯ್ಯುವುದರ ಮೇಲೆ ನಿರ್ಬಂಧಗಳು
5. ಕೆಲವು ಚಟುವಟಿಕೆಗಳಿಗಾಗಿ ಧಾರ್ಮಿಕ ಸಂಸ್ಥೆಗಳ ನಿಧಿಗಳನ್ನು ಉಪಯೋಗಿಸುವ ಬಗ್ಗೆ ನಿಷೇಧ
6. ರಾಜಕೀಯ ವಿಚಾರಗಳ ಪ್ರಸಾರಕ್ಕಾಗಿ ಧಾರ್ಮಿಕ ವೇದಿಕೆಗಳ ನಿಷೇಧ
7. ದಂಡನೆಗಳು
8. ಈ ಅಧಿನಿಯಮದ ಮೇರೆಗೆ ಅಪರಾಧಿಯೆಂದು ನಿರ್ಣೀತರಾದ ಅಥವಾ ಆರೋಪಿತರಾದ ವ್ಯಕ್ತಿಗಳನ್ನು ಅನರ್ಹಗೊಳಿಸುವುದು.
9. ಕೆಲವು ವ್ಯಕ್ತಿಗಳು ಪೊಲೀಸರಿಗೆ ಮಾಹಿತಿಯನ್ನು ಕೊಡಲು ಬದ್ಧರಾಗಿರತಕ್ಕದ್ದು.
10. ನಿರಸನ ಮತ್ತು ಉಳಿಸುವಿಕೆ

## ಧಾರ್ಮಿಕ ಸಂಸ್ಥೆಗಳ (ದುರುಪಯೋಗ ಪ್ರತಿಬಂಧ) ಅಧಿನಿಯಮ, 1988

## (1988ರ ಅಧಿನಿಯಮ ಸಂಖ್ಯೆ 41)

[1ನೇ ಸೆಪ್ಟೆಂಬರ್ 1988]

ರಾಜಕೀಯ ಮತ್ತು ಇತರ ಉದ್ದೇಶಗಳಿಗಾಗಿ ಧಾರ್ಮಿಕ ಸಂಸ್ಥೆಗಳನ್ನು ದುರುಪಯೋಗಿಸಿಕೊಳ್ಳುವುದನ್ನು ಪ್ರತಿಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೊಂಬತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಧಾರ್ಮಿಕ ಸಂಸ್ಥೆಗಳ (ದುರುಪಯೋಗ ಪ್ರತಿಬಂಧ) ಅಧಿನಿಯಮ, 1988 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, 1988ರ ಮೇ 26ನೇ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮದ್ದು ಗುಂಡು" ಎನ್ನುವುದು ಆಯುಧಗಳ ಅಧಿನಿಯಮ, 1959 (1959ರ 54)ರ 2ನೇ ಪ್ರಕರಣದ (1)ನೇ ಉಪ ಪ್ರಕರಣದ (ಬಿ) ಖಂಡದಲ್ಲಿ ಇರುವಂಥದೇ ಅರ್ಥವನ್ನು ಹೊಂದಿರತಕ್ಕದ್ದು;

(ಬಿ) "ಆಯುಧಗಳು" ಎನ್ನುವುದು ಆಯುಧಗಳ ಅಧಿನಿಯಮ, 1959 (1959ರ 54)ರ 2ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದಲ್ಲಿ ಇರುವಂಥದೇ ಅರ್ಥವನ್ನು ಹೊಂದಿರತಕ್ಕದ್ದು;

(ಸಿ) ಒಂದು ಧಾರ್ಮಿಕ ಸಂಸ್ಥೆಗೆ ಸಂಬಂಧಪಟ್ಟಂತೆ "ವ್ಯವಸ್ಥಾಪಕ" ಎಂದರೆ, ಯಾವನೇ ಧಾರ್ಮಿಕ ಕಾರ್ಯ ನಿರ್ವಾಹಕನನ್ನು ಒಳಗೊಂಡು, (ಯಾವುದೇ ಹೆಸರಿನಿಂದ ಕರೆಯಲಿ) ಯಾವ ವ್ಯಕ್ತಿಯು, ತತ್ಕಾಲದಲ್ಲಿ ತಾನೊಬ್ಬನೇ ಅಥವಾ ಇತರ ವ್ಯಕ್ತಿಗಳ ಜೊತೆಗೂಡಿ ಆ ಧಾರ್ಮಿಕ ಸಂಸ್ಥೆಯ ವ್ಯವಹಾರಗಳ, ಅದರ ಪ್ರಕಾರ್ಯಗಳ ಅಥವಾ ಸ್ವತ್ತುಗಳ ಆಡಳಿತ ನಡೆಸುವನೋ, ಅವುಗಳ ವ್ಯವಸ್ಥಾಪನೆಯನ್ನು ನೋಡಿಕೊಳ್ಳುವನೋ ಅಥವಾ ಅವುಗಳನ್ನು ಅನ್ಯಥಾ ನಿಯಂತ್ರಿಸುವನೋ ಆ ಪ್ರತಿಯೊಬ್ಬ ವ್ಯಕ್ತಿ;

(ಡಿ) "ರಾಜಕೀಯ ಚಟುವಟಿಕೆ" - ಇದು ಸಭೆಗಳು, ಪ್ರದರ್ಶನಗಳು, ಮೆರವಣಿಗೆಗಳನ್ನು ಸಂಘಟಿಸುವ ಮೂಲಕ, ನಿಧಿಗಳ ಸಂಗ್ರಹಣೆ ಅಥವಾ ಬಟವಾಡೆಯನ್ನು ಮಾಡುವ ಮೂಲಕ ಅಥವಾ ನಿರ್ದೇಶನಗಳು ಅಥವಾ ಹುಕುಂಗಳನ್ನು ಹೊರಡಿಸುವ ಮೂಲಕ ಅಥವಾ ಇತರ ಯಾವುದೇ ರೀತಿಯಲ್ಲಿ ರಾಜಕೀಯ ಪಕ್ಷದ ಧ್ಯೇಯಗಳು ಅಥವಾ ಉದ್ದೇಶಗಳನ್ನು ಅಥವಾ ರಾಜಕೀಯ ಸ್ವರೂಪದ ಯಾವುದೇ ಗುರಿ, ವಿಷಯ ಅಥವಾ ಪ್ರಶ್ನೆಯನ್ನು ಉತ್ತೇಜಿಸುವ ಅಥವಾ ಪ್ರಸಾರ ಮಾಡುವಂಥ ಯಾವುದೇ ಚಟುವಟಿಕೆಯನ್ನು ಒಳಗೊಳ್ಳುತ್ತದೆ ಮತ್ತು ಅದು ಸಂಸತ್ತಿನ, ಯಾವುದೇ ರಾಜ್ಯದ ವಿಧಾನ ಮಂಡಲದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಯಾವುದೇ ಚುನಾವಣೆಗಾಗಿ ಒಬ್ಬ ಉಮೇದುವಾರನಾಗಿ

ಆಯ್ಕೆಯನ್ನು ಬಯಸುವ ವ್ಯಕ್ತಿಯು ನಡೆಸುವ ಅಥವಾ ಅವನ ಪರವಾಗಿ ನಡೆಸಲಾಗುವ ಅಂಥ ಚಟುವಟಿಕೆಯನ್ನು ಸಹ ಒಳಗೊಳ್ಳುತ್ತದೆ;

(ಇ) "ರಾಜಕೀಯ ಪಕ್ಷ" ಎಂದರೆ,–

(i) ತತ್ಕಾಲದಲ್ಲಿ ಜಾರಿಯಲ್ಲಿರುವ ಚುನಾವಣಾ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ, 1968ರ ಮೇರೆಗೆ ಒಂದು ರಾಜಕೀಯ ಪಕ್ಷವೆಂದು ಭಾರತದ ಚುನಾವಣಾ ಆಯೋಗದಲ್ಲಿ ನೋಂದಾಯಿತವಾಗಿರುವಂಥ ಅಥವಾ ನೋಂದಾಯಿತವಾಗಿರುವುದಾಗಿ ಭಾವಿಸಲಾಗಿರುವಂಥ; ಅಥವಾ

(ii) ಯಾವುದೇ ವಿಧಾನ ಮಂಡಲದ ಚುನಾವಣೆಗಾಗಿ ಉಮೇದುವಾರರನ್ನು ನಿಲ್ಲಿಸಿರುವಂಥ, ಆದರೆ ಚುನಾವಣಾ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ, 1968ರ ಮೇರೆಗೆ ಒಂದು ರಾಜಕೀಯ ಪಕ್ಷವೆಂದು ನೋಂದಾಯಿಸಿರದಂಥ ಅಥವಾ ನೋಂದಾಯಿತ ವಾಗಿದೆಯೆಂದು ಭಾವಿಸಲಾಗಿರದಂಥ; ಅಥವಾ

(iii) ಯಾವುದೇ ರಾಜಕೀಯ ಚಟುವಟಿಕೆಯನ್ನು ನಡೆಸಲು ಅಥವಾ ಚುನಾವಣೆಯ ಮೂಲಕ ಅಥವಾ ಅನ್ಯಥಾ ರಾಜಕೀಯ ಅಧಿಕಾರವನ್ನು ಆರ್ಜಿಸಲು ಅಥವಾ ಚಲಾಯಿಸಲು ಸಂಘಟಿಸಲಾದ

– ಒಂದು ಸಂಘ ಅಥವಾ ವ್ಯಕ್ತಿಗಳ ನಿಕಾಯ.

(ಎಫ್) "ಧಾರ್ಮಿಕ ಸಂಸ್ಥೆ" ಎಂದರೆ ಯಾವುದೇ ಧರ್ಮ ಅಥವಾ ಧರ್ಮದ ಅವಲಂಬನೆಯನ್ನು ವೃದ್ಧಿಪಡಿಸುವ ಒಂದು ಸಂಸ್ಥೆ ಮತ್ತು ಅದು ಯಾವುದೇ ಹೆಸರು ಅಥವಾ ಅಭಿದಾನದಿಂದ ಕರೆಯಲಾಗುವ, ಸಾರ್ವಜನಿಕ ಧಾರ್ಮಿಕ ಪೂಜಾಸ್ಥಳವೆಂದು ಉಪಯೋಗಿಸಲಾಗುತ್ತಿರುವ ಯಾವುದೇ ಸ್ಥಳ ಅಥವಾ ಆವರಣವನ್ನು ಒಳಗೊಳ್ಳುತ್ತದೆ.

**3. ಕೆಲವು ಉದ್ದೇಶಗಳಿಗಾಗಿ ಧಾರ್ಮಿಕ ಸಂಸ್ಥೆಗಳನ್ನು ಉಪಯೋಗಿಸುವುದರ ಬಗ್ಗೆ ನಿಷೇಧ.–** ಯಾವುದೇ ಧಾರ್ಮಿಕ ಸಂಸ್ಥೆ ಅಥವಾ ಅದರ ವ್ಯವಸ್ಥಾಪಕನು ಸಂಸ್ಥೆಗೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುದೇ ಆವರಣವನ್ನು, ಕೆಳಕಂಡ ಉದ್ದೇಶಗಳಿಗಾಗಿ, ಎಂದರೆ:–

(ಎ) ಯಾವುದೇ ರಾಜಕೀಯ ಚಟುವಟಿಕೆಯ ಉತ್ತೇಜನ ಅಥವಾ ಅದರ ಪ್ರಸಾರಕ್ಕಾಗಿ; ಅಥವಾ

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಒಂದು ಅಪರಾಧದ ಬಗ್ಗೆ ಅರೋಪಿತನಾದ ಅಥವಾ ಅಪರಾಧಿಯೆಂದು ನಿರ್ಣೀತನಾದ ಯಾವನೇ ವ್ಯಕ್ತಿಗೆ ಆಶ್ರಯವನ್ನು ಕೊಡುವುದಕ್ಕಾಗಿ; ಅಥವಾ

(ಸಿ) ಯಾವುದೇ ಆಯುಧಗಳು ಅಥವಾ ಮದ್ದುಗುಂಡುಗಳನ್ನು ದಾಸ್ತಾನು ಮಾಡುವುದಕ್ಕಾಗಿ; ಅಥವಾ

(ಡಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನನ್ನು ಉಲ್ಲಂಘಿಸಿ ಯಾವುವೇ ಸರಕುಗಳು ಅಥವಾ ಪದಾರ್ಥಗಳನ್ನು ಇಡುವುದಕ್ಕಾಗಿ; ಅಥವಾ

(ಇ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸಿಂಧುವಾದ ಲೈಸೆನ್ಸು ಅಥವಾ ಅನುಮತಿ ಪಡೆಯದೆ ತಳಮನೆಗಳು, ಬಂಕರ್, ಗೋಪುರಗಳು ಅಥವಾ ಗೋಡೆಗಳನ್ನು ಒಳಗೊಂಡು ಯಾವುದೇ ನಿರ್ಮಿತಿ ಅಥವಾ ರಕ್ಷಣಾ ಸಾಧನವನ್ನು ನಿರ್ಮಿಸುವುದಕ್ಕಾಗಿ ಅಥವಾ ಕಟ್ಟುವುದಕ್ಕಾಗಿ; ಅಥವಾ

(ಎಫ್) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನಿಷೇಧಿಸಲಾದ ಯಾವುದೇ ಕಾರ್ಯವನ್ನು ನಡೆಸುವುದಕ್ಕಾಗಿ ಅಥವಾ ಯಾವುದೇ ನ್ಯಾಯಾಲಯವು ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿ ಯಾವುದೇ ಕಾನೂನುಬಾಹಿರ ಅಥವಾ ವಿಧ್ವಂಸಕ ಕಾರ್ಯವನ್ನು ನಡೆಸುವುದಕ್ಕಾಗಿ; ಅಥವಾ

(ಜಿ) ವಿವಿಧ ಧರ್ಮಗಳು, ಜನಾಂಗಗಳು, ಭಾಷೆ ಅಥವಾ ಪ್ರಾದೇಶಿಕ ಗುಂಪುಗಳು ಅಥವಾ ಜಾತಿಗಳು ಅಥವಾ ಜನ ಸಮುದಾಯಗಳ ನಡುವೆ ಅಸಾಮರಸ್ಯ ಅಥವಾ ವೈರತ್ವ, ದ್ವೇಷ ಅಥವಾ ವೈಮನಸ್ಯವನ್ನು ಉತ್ತೇಜಿಸುವ ಅಥವಾ ಉತ್ತೇಜಿಸಲು ಪ್ರಯತಿಸುವಂಥ ಯಾವುದೇ ಕಾರ್ಯವನ್ನು ಮಾಡುವುದಕ್ಕಾಗಿ; ಅಥವಾ

(ಹೆಚ್) ಭಾರತದ ಸಾರ್ವಭೌಮತ್ವ, ಐಕ್ಯತೆ ಮತ್ತು ಅಖಂಡತೆಗೆ ಬಾಧಕವಾಗುವ ಯಾವುದೇ ಚಟುವಟಿಕೆಯನ್ನು ನಡೆಸುವುದಕ್ಕಾಗಿ; ಅಥವಾ

(ಐ) ರಾಷ್ಟ್ರ ಗೌರವ ಅಪಮಾನ ಪ್ರತಿಬಂಧ ಅಧಿನಿಯಮ, 1971 (1971ರ 69)ರ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಕಾರ್ಯವನ್ನು ಮಾಡುವುದಕ್ಕಾಗಿ

– ಉಪಯೋಗಿಸತಕ್ಕದ್ದಲ್ಲ ಅಥವಾ ಉಪಯೋಗಿಸಲು ಅವಕಾಶ ಮಾಡಿಕೊಡತಕ್ಕದ್ದಲ್ಲ.

**4. ಧಾರ್ಮಿಕ ಸಂಸ್ಥೆಯೊಳಗೆ ಆಯುಧಗಳು ಮತ್ತು ಮದ್ದುಗುಂಡುಗಳನ್ನು ಒಯ್ಯುವುದರ ಮೇಲೆ ನಿರ್ಬಂಧಗಳು.–** ಯಾವುದೇ ಧಾರ್ಮಿಕ ಸಂಸ್ಥೆ ಅಥವಾ ಅದರ ವ್ಯವಸ್ಥಾಪಕನು, ಆ ಧಾರ್ಮಿಕ ಸಂಸ್ಥೆಯೊಳಗೆ ಯಾವುವೇ ಆಯುಧಗಳು ಅಥವಾ ಮದ್ದುಗುಂಡುಗಳು ಅಥವಾ ಯಾವುವೇ ಆಯುಧಗಳನ್ನು ಅಥವಾ ಮದ್ದುಗುಂಡುಗಳನ್ನು ಒಯ್ಯುವ ಯಾವನೇ ವ್ಯಕ್ತಿಗೆ ಒಳಹೋಗಲು ಅವಕಾಶ ಕೊಡತಕ್ಕದ್ದಲ್ಲ;

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ,–

(ಎ) ಸಿಖ್ ಧರ್ಮವನ್ನು ಅವಲಂಬಿಸಿರುವ ಯಾವನೇ ವ್ಯಕ್ತಿಯು ಕಿರ್ಪಾಣವನ್ನು ಧರಿಸುವುದಕ್ಕೆ ಮತ್ತು ಅದನ್ನು ಒಯ್ಯುವುದಕ್ಕೆ; ಅಥವಾ

(ಬಿ) ರೂಢಿ ಅಥವಾ ಅಚರಣೆಯ ಮೂಲಕ ಸ್ಥಾಪಿತವಾದ ಸಂಸ್ಥೆಯ ಯಾವುದೇ ಧಾರ್ಮಿಕ ಕರ್ಮಾಚರಣೆಯ ಅಥವಾ ಸಂಸ್ಕಾರದ ಅಂಗವಾಗಿ ಉಪಯೋಗಿಸುವಂಥ ಯಾವುವೇ ಆಯುಧಗಳಿಗೆ

– ಅನ್ವಯವಾಗತಕ್ಕದ್ದಲ್ಲ.

**5. ಕೆಲವು ಚಟುವಟಿಕೆಗಳಿಗಾಗಿ ಧಾರ್ಮಿಕ ಸಂಸ್ಥೆಗಳ ನಿಧಿಗಳನ್ನು ಉಪಯೋಗಿಸುವ ಬಗ್ಗೆ ನಿಷೇಧ.–** ಯಾವುದೇ ಧಾರ್ಮಿಕ ಸಂಸ್ಥೆಯು ಅಥವಾ ಅದರ ವ್ಯವಸ್ಥಾಪಕನು, ಆ ಸಂಸ್ಥೆಗೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುವೇ ನಿಧಿಗಳು ಅಥವಾ ಇತರ ಸ್ವತ್ತುಗಳನ್ನು ಯಾವುದೇ ರಾಜಕೀಯ ಪಕ್ಷದ

ಪ್ರಯೋಜನಕ್ಕಾಗಿ ಅಥವಾ ಯಾವುದೇ ರಾಜಕೀಯ ಚಟುವಟಿಕೆಯ ಉದ್ದೇಶಕ್ಕಾಗಿ ಅಥವಾ ಯಾವುದೇ ಕಾನೂನಿನ ಮೇರೆಗೆ ಅಪರಾಧವೆಂದು ದಂಡನೀಯವಾಗುವಂಥ ಯಾವುದೇ ಕಾರ್ಯವನ್ನು ಮಾಡುವುದಕ್ಕಾಗಿ ಉಪಯೋಗಿಸತಕ್ಕದ್ದಲ್ಲ ಅಥವಾ ಉಪಯೋಗಿಸಲು ಅವಕಾಶ ಮಾಡಿಕೊಡತಕ್ಕದ್ದಲ್ಲ.

**6. ರಾಜಕೀಯ ವಿಚಾರಗಳ ಪ್ರಸಾರಕ್ಕಾಗಿ ಧಾರ್ಮಿಕ ವೇದಿಕೆಗಳ ನಿಷೇಧ.–** ಯಾವುದೇ ಧಾರ್ಮಿಕ ಸಂಸ್ಥೆ ಅಥವಾ ಅದರ ವ್ಯವಸ್ಥಾಪಕನು, ಆ ಸಂಸ್ಥೆಯ ಆಶ್ರಯದಲ್ಲಿ ವ್ಯವಸ್ಥೆಗೊಳಿಸಿದ ಅಥವಾ ನಡೆಸಿದ ಯಾವುದೇ ಕರ್ಮಾಚರಣೆ, ಹಬ್ಬ, ಗೋಷ್ಠಿ, ಮೆರವಣಿಗೆ ಅಥವಾ ಸಭೆಯನ್ನು ಯಾವುದೇ ರಾಜಕೀಯ ಚಟುವಟಿಕೆಗಾಗಿ ಉಪಯೋಗಿಸಲು ಅವಕಾಶ ಮಾಡಿಕೊಡತಕ್ಕದ್ದಲ್ಲ.

**7. ದಂಡನೆಗಳು.–** ಯಾವುದೇ ಧಾರ್ಮಿಕ ಸಂಸ್ಥೆ ಅಥವಾ ಅದರ ವ್ಯವಸ್ಥಾಪಕನು 3ನೇ ಪ್ರಕರಣ, 4ನೇ ಪ್ರಕರಣ, 5ನೇ ಪ್ರಕರಣ ಅಥವಾ 6ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವಲ್ಲಿ, ಆ ವ್ಯವಸ್ಥಾಪಕನು ಮತ್ತು ಅಂಥ ಉಲ್ಲಂಘನೆಗೆ ಸಂಬಂಧಿಸಿದ ಪ್ರತಿಯೊಬ್ಬ ವ್ಯಕ್ತಿಯು, ಐದು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**8. ಈ ಅಧಿನಿಯಮದ ಮೇರೆಗೆಅಪರಾಧಿಯೆಂದು ನಿರ್ಣೀತವಾದ ಅಥವಾ ಅರೋಪಿತರಾದ ವ್ಯಕ್ತಿಗಳನ್ನು ಅನರ್ಹಗೊಳಿಸುವುದು.–** (1) ಧಾರ್ಮಿಕ ಸಂಸ್ಥೆಯ ಯಾವನೇ ವ್ಯವಸ್ಥಾಪಕ ಅಥವಾ ಇತರ ನೌಕರನು, ಈ ಅಧಿನಿಯಮದ ಮೇರೆಗಿನ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾದ ಮೇಲೆ, ಅವನನ್ನು ಆ ಪದದಿಂದ ಅಥವಾ ಹುದ್ದೆಯಿಂದ ತೆಗೆದುಹಾಕತಕ್ಕದ್ದು ಮತ್ತು ಇತರ ಯಾವುದೇ ಕಾನೂನಿನಲ್ಲಿ ತದ್ವಿರುದ್ಧವಾಗಿ ಏನೇ ಅಡಕವಾಗಿದ್ದಾಗ್ಯೂ, ಅವನು ಅಪರಾಧಿ ಎಂದು ನಿರ್ಣೀತನಾದ ದಿನಾಂಕದಿಂದ ಆರು ವರ್ಷಗಳ ಅವಧಿಯವರೆಗೆ ಯಾವುದೇ ಧಾರ್ಮಿಕ ಸಂಸ್ಥೆಯಲ್ಲಿ ವ್ಯವಸ್ಥಾಪಕನಾಗಿ ಅಥವಾ ಯಾವುದೇ ಇತರ ನಾತೆಯಲ್ಲಿ ನೇಮಕಗೊಳ್ಳಲು ಅನರ್ಹನಾಗತಕ್ಕದ್ದು.

(2) ಧಾರ್ಮಿಕ ಸಂಸ್ಥೆಯ ಯಾವನೇ ವ್ಯವಸ್ಥಾಪಕ ಅಥವಾ ಇತರ ನೌಕರರನ್ನು ಈ ಅಧಿನಿಯಮದ ಮೇರೆಗಿನ ಅಪರಾಧದ ಬಗ್ಗೆ ಆರೋಪಿಸಿರುವಲ್ಲಿ, ಮತ್ತು ಯಾವುದೇ ನ್ಯಾಯಾಲಯದಲ್ಲಿ ಅಂಥ ವ್ಯಕ್ತಿಯನ್ನು ಪ್ರಾಸಿಕ್ಯೂಟ್ ಮಾಡುವುದಕ್ಕಾಗಿ ಅವನ ವಿರುದ್ಧ ಆಪಾದನಾ ಪಟ್ಟಿಯನ್ನು ದಾಖಲು ಮಾಡಿರುವಲ್ಲಿ ಮತ್ತು ಆ ನ್ಯಾಯಾಲಯವು, ಆ ಆಪಾದನಾ ಪಟ್ಟಿಯನ್ನು ಪರ್ಯಾಲೋಚಿಸಿದ ತರುವಾಯ ಹಾಗೂ ಪ್ರಾಸಿಕ್ಯೂಷನ್ ಮತ್ತು ಆಪಾದಿತನನ್ನು ಸುನಾವಣೆ ಮಾಡಿದ ತರುವಾಯ, ಮೊದಲ ನೋಟಕ್ಕೆ ಸಮ್ಮತವಾದ ಪ್ರಕರಣವು ಅಸ್ತಿತ್ವದಲ್ಲಿದೆಯೆಂದು ಅಭಿಪ್ರಾಯಪಡುವಲ್ಲಿ, ಅಧಿವಿಚಾರಣೆಯು ಇತ್ಯರ್ಥದಲ್ಲಿರುವಾಗ ಆ ವ್ಯಕ್ತಿಯು ಅವನ ಪದದ ಅಥವಾ ಹುದ್ದೆಯ ಅಧಿಕಾರಗಳನ್ನು ಚಲಾಯಿಸುವುದನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸುವುದನ್ನು ನಿಗ್ರಹಿಸುವ ಆದೇಶವನ್ನು ಮಾಡತಕ್ಕದ್ದು ಅಥವಾ ನಿರ್ದೇಶನವನ್ನು ನೀಡತಕ್ಕದ್ದು.

(3) ಯಾವನೇ ವ್ಯವಸ್ಥಾಪಕ ಅಥವಾ ಇತರ ನೌಕರರನ್ನು (1)ನೇ ಉಪಪ್ರಕರಣದ ಮೇರೆಗೆ ತೆಗೆದು ಹಾಕಿರುವಲ್ಲಿ ಅಥವಾ (2)ನೇ ಉಪಪ್ರಕರಣದ ಮೇರೆಗೆ ನಿಗ್ರಹಿಸಿರುವಲ್ಲಿ, ಅಂಥ ತೆಗೆದುಹಾಕುವಿಕೆಯಿಂದ ಅಥವಾ

ನಿಗ್ರಹಿಸುವಿಕೆಯಿಂದ ಉಂಟಾಗುವ ಖಾಲಿಸ್ಥಾನವನ್ನು ಸದರಿ ಧಾರ್ಮಿಕ ಸಂಸ್ಥೆಗೆ ಅನ್ವಯವಾಗಬಹುದಾದ ಕಾನೂನಿನಲ್ಲಿ ಉಪಬಂಧಿಸಿದ ರೀತಿಯಲ್ಲಿ ಭರ್ತಿ ಮಾಡಬಹುದು.

**9. ಕೆಲವು ವ್ಯಕ್ತಿಗಳು ಪೊಲೀಸರಿಗೆ ಮಾಹಿತಿಯನ್ನು ಕೊಡಲು ಬದ್ಧರಾಗಿರತಕ್ಕದ್ದು.–** ಧಾರ್ಮಿಕ ಸಂಸ್ಥೆಯ ಪ್ರತಿಯೊಬ್ಬ ವ್ಯವಸ್ಥಾಪಕ ಅಥವಾ ಇತರ ನೌಕರನು, ಯಾವ ಪೊಲೀಸು ಅಧಿಕಾರಿಯ ಸ್ಥಳೀಯ ಅಧಿಕಾರ ವ್ಯಾಪ್ತಿಯಲ್ಲಿ ಆ ಧಾರ್ಮಿಕ ಸಂಸ್ಥೆಯು ಇರುವದೋ ಆ ಪೊಲೀಸು ಠಾಣೆಯ ಅಧಿಕಾರಿಗೆ, ಈ ಅಧಿನಿಯಮದ ಉಪಬಂಧಗಳ ಯಾವುದೇ ಉಲ್ಲಂಘನೆಯ ಬಗ್ಗೆ ಅಥವಾ ಸನ್ನಿಹಿತ ಉಲ್ಲಂಘನೆಯ ಬಗ್ಗೆ ಮಾಹಿತಿಯನ್ನು ಕೊಡಲು ಬದ್ಧನಾಗಿರತಕ್ಕದ್ದು ಮತ್ತು ಹಾಗೆ ಮಾಡಲು ತಪ್ಪಿದರೆ ಅವನು ಭಾರತ ದಂಡ ಸಂಹಿತೆಯ (1860ರ 45) 176ನೇ ಪ್ರಕರಣದ ಮೇರೆಗೆ ದಂಡನೀಯನಾಗತಕ್ಕದ್ದು.

**10. ನಿರಸನ ಮತ್ತು ಉಳಿಸುವಿಕೆ.–** (1) ಧಾರ್ಮಿಕ ಸಂಸ್ಥೆಗಳ (ದುರುಪಯೋಗ ಪ್ರತಿಬಂಧ) ಅಧ್ಯಾದೇಶ, 1988 (1988ರ ಅಧ್ಯಾದೇಶ 3) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ದಾಗ್ಯೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಎಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

****